**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**
**<u>ಘನ ನ್ಯಾಯಾಲಯದಲ್ಲಿ</u>**
**<u>ಪ್ರಕರಣ ಸಂಖ್ಯೆಃ ಎಸ್.ಸಿ.98/2018</u>**

ದಿನಾಂಕಃ 02.08.2021
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾಃ 3 (ಚಾ.ಸಾ.2)

| | | |
|---|---|---|
| ಹೆಸರು | ಃ | ರಾಜಣ್ಣ |
| ತಂದೆಯ ಹೆಸರು | ಃ | ಕೃಷ್ಣಪ್ಪ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ದಂಡೇನಹಳ್ಳಿ |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ಪಿರ್ಯಾದಿ ನನ್ನ ಪತ್ನಿ ಹಾಗು ಚಾಸಾ.3 ನನ್ನ ಮಗ. ನನಗೆ ಚಾಸಾ.4 ರಿಂದ 8 ಗೊತ್ತು ಹಾಗು ಆರೋಪಿಗಳು ನನಗೆ ಗೊತ್ತು.

2. ತಾಃ 13.11.2014 ರಂದು ಸಂಜೆ 6 ಗಂಟೆ ಸಮಯದಲ್ಲಿ ನಮ್ಮ ಮನೆಯ ಮುಂದೆ ಆರೋಪಿಗಳು ನಮ್ಮ ಜಮೀನಿನಲ್ಲಿ ಜೋಳ ಕುಯ್ದು ವಿಚಾರದಲ್ಲಿ ನಮ್ಮ ಮೇಲೆ ಗಲಾಟೆ ಮಾಡಿದರು. ಊರಿನ ಜನ ಬಂದು ಸದರಿ ಜಗಳ ಬಿಡಿಸಿದರು.

3. ಮರುದಿನ ಬೆಳಿಗ್ಗೆ 9-10 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಮಗ ಅಶ್ವಥಕಟ್ಟೆ ಮೇಲೆ ಕುಳಿತ್ತಿದ್ದೆವು. ಸದರಿ ಅಶ್ವಥಕಟ್ಟೆ ನಮ್ಮ ಮನೆಯ ಪಕ್ಕದಲ್ಲಿಯೇ ಇದೆ. ಆ ಸಮಯದಲ್ಲಿ ನನ್ನ ಪತ್ನಿ ಪಕ್ಕದಲ್ಲಿದ್ದ ನಮ್ಮ ಮನೆಯ ಕಾಂಪೌಂಡಿನಲ್ಲಿದ್ದರು. ಸದರಿ ಸ್ಥಳಕ್ಕೆ ಐದು ಆರೋಪಿಗಳು ಬಂದರು. ಆರೋಪಿ - ಗೌಡಯ್ಯ ಹಾಗು ರಾಮಣ್ಣ ಕೈಯಲ್ಲಿ ರಾಡುಗಳು ಹಾಗು ಆರೋಪಿ - ಮಂಜನ ಕೈಯಲ್ಲಿ ದೊಣ್ಣೆ ಇದ್ದಿತು. ಆರೋಪಿಗಳು ಬಂದವರೇ ಹಿಂದಿನ ದಿನ ನಡೆದ ಗಲಾಟೆಯ ವಿಚಾರದಲ್ಲಿ ನಮಗೆ ಹೊಡೆದರು. ಆರೋಪಿ ಗೌಡ ರಾಡಿನಿಂದ ನನ್ನ

ಬೆನ್ನಿಗೆ, ತಲೆಗೆ 2 ಏಟು ಹೊಡೆದನು. ಆರೋಪಿ - ಮಂಜ ದೊಣ್ಣೆಯಿಂದ ನನ್ನ ಎಡ ಕಿಬ್ಬರಿಗೆ, ಪಕ್ಕೆ ಹಾಗು ಬಲಗಾಲಿಗೆ ಹೊಡೆದನು. ಆರೋಪಿ - ರಾಮಣ್ಣ ರಾಡಿನಿಂದ ನನ್ನ ಬೆನ್ನಿಗೆ ಹಾಗು ಕಾಲಿಗೆ ಹೊಡೆದನು.

4. ನನ್ನ ಮಗನ ಕಾಲು ಹಾಗು ಬೆನ್ನಿಗೆ ಆರೋಪಿ - ಗೌಡ ಮತ್ತು ಮಂಜ ರಾಡು ಹಾಗು ಮರದ ದೊಣ್ಣೆಯಿಂದ ಹೊಡೆದರು. ಆ ಹೊತ್ತಿಗೆ ನನ್ನ ಪತ್ನಿ ಸ್ಥಳಕ್ಕೆ ಓಡಿ ಬಂದರು. ಆಗ ಆರೋಪಿ - ಮಂಜ ಮರದ ದೊಣ್ಣೆಯಿಂದ ನನ್ನ ಪತ್ನಿಯ ಮಂಡಿಗೆ ಹೊಡೆದನು. ಅಷ್ಟು ಹೊತ್ತಿಗೆ ಚಿಕ್ಕೇಗೌಡ ಹಾಗು ಅಕ್ಕಪಕ್ಕದ ಮನೆಯವರು ಸ್ಥಳಕ್ಕೆ ಓಡಿ ಬಂದು ಬಿಡಿಸಿದರು. ನನ್ನ ಪತ್ನಿ ನನ್ನನ್ನು ಹಾಗು ನನ್ನ ಮಗನನ್ನು ಕರೆದುಕೊಂಡು ಕುಣಿಗಲ್ ಆಸ್ಪತ್ರೆಗೆ ಹೋದರು, ಅಲ್ಲಿ ಆಗುವುದಿಲ್ಲ ಎಂದು ಹೇಳಿದ್ದರಿಂದ ನಮ್ಮನ್ನು ನಂತರ ಬೆಂಗಳೂರಿನ ಸೌತ್‌ಯಂಡ್ ವೃತ್ತದ ಬಳಿಯಿರುವ ಬೆಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋದರು. ಈ ಬಗ್ಗೆ ನನ್ನ ಪತ್ನಿ ಪೊಲೀಸರಿಗೆ ದೂರು ನೀಡಿರುತ್ತಾರೆ.

5. ಘಟನೆಯ ಸಮಯದಲ್ಲಿ ಆರೋಪಿಗಳು ನಮ್ಮನ್ನು ಕುರಿತು ಇವರನ್ನು ಬಿಡಬಾರದು ಸಾಯಿಸಿ ಬಿಡಬೇಕು ಎಂದು ಹೇಳುತ್ತಿದ್ದರು. ಈ ಬಗ್ಗೆ ಪೊಲೀಸರಿಗೆ ನಾನು ನಂತರ ಹೇಳಿಕೆ ನೀಡಿರುತ್ತೇನೆ. ನಾನು ಆಸ್ಪತ್ರೆಯಲ್ಲಿ 15-20 ದಿನಗಳ ಕಾಲ ಇದ್ದೆನು.

6. ಘಟನೆ ಸಮಯದಲ್ಲಿ ನನ್ನ ಮತ್ತು ನನ್ನ ಮಗನ ಬಟ್ಟೆಗಳಿಗೆ ರಕ್ತ ಆಗಿತ್ತು. ಸದರಿ ಬಟ್ಟೆಗಳನ್ನು 20 ದಿನಗಳ ನಂತರ ಅಂದರೆ ಆಸ್ಪತ್ರೆಯಿಂದ ಬಂದ ಮೇಲೆ ಪೊಲೀಸರಿಗೆ ನೀಡಲಾಗಿದೆ. ಪೊಲೀಸರು ಸದರಿ ಬಟ್ಟೆಗಳನ್ನು ತಮ್ಮ ವಶಕ್ಕೆ ಇಟ್ಟುಕೊಂಡರು. ಆ ಸಮಯದಲ್ಲಿ ಚಿಕ್ಕೇಗೌಡ ನನ್ನೊಂದಿಗೆ ಠಾಣೆಗೆ ಬಂದಿದ್ದರು. ಆ ಸಮಯದಲ್ಲಿ ಪೊಲೀಸರು ದಾಖಲೆಯೊಂದಕ್ಕೆ ನನ್ನ ಸಹಿ ಪಡೆದರು. ಅಮಾನತ್ತು ಪಂಚನಾಮೆ ಹಾಗು ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅಮಾನತ್ತು ಪಂಚನಾಮೆಯನ್ನು ಈಗ ನಿಪಿ.3 ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

**(ಸೀಲಾದ ಪ್ಯಾಕೆಟ್‌ಗಳನ್ನು ಈಗ ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು.)**

7. ಸಾಕ್ಷಿ ನೋಡಿ ಗುರುತಿಸಿದ 2 ಶರ್ಟ್‌ಗಳು ಹಾಗು ಒಂದು ಬನಿಯನ್ ಈಗ ಕ್ರಮವಾಗಿ ಎಂ.ಓ.4 ರಿಂದ 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ**

**(ಪಾಟೀ ಸವಾಲನ್ನು ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಮಧ್ಯಾಹ್ನಕ್ಕೆ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ : 09.08.2021**
**ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ**

**(ಪಾಟೀ ಸವಾಲು ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ತಾಃ 02.08.2021 ರಂದು ಈ ಸಾಕ್ಷಿಯ ಪಾಟೀ ಸವಾಲನ್ನು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಈ ದಿನಕ್ಕೆ ಮುಂದೂಡಿದ್ದು, ಈ ದಿನ ಆರೋಪಿ ಪರ ವಕೀಲರು ಕಾಲಾವಕಾಶ ನೀಡಲು ಯಾವುದೇ ಸಮಂಜಸವಾದ ಕಾರಣವನ್ನು ನೀಡಿಲ್ಲವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.)**

**ಮರುವಿಚಾರಣೆ : ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಮನಗರ.**

**ದಿನಾಂಕಃ 18.08.2022**
**(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು.)**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಂ.ಡಿ.ಕೆ., ವಕೀಲರಿಂದಃ</u>**

**8.** ಜೋಳ ಕ್ಯೂಯ್ದಿ ನನ್ನ ಜಮೀನು ಸರ್ವೆ ನಂ.84 ಆಗಿತ್ತು. ಜೋಳ ಕ್ಯೂಯ್ದಿ ಸಮಯದಲ್ಲಿ ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿತ್ತು. ಸದರಿ ಸರ್ವೆ ನಂ.84, 35 ಗುಂಟೆ ವಿಸ್ತೀರ್ಣ ಹೊಂದಿದೆ. ದಂಡೇನಹಳ್ಳಿಯಿಂದ ಸದರಿ ಜಮೀನು ಸುಮಾರು ಅರ್ಧ ಕಿ.ಮೀ ದೂರ ಇದೆ.

**9.** ಕುದೂರು ಠಾಣೆಯ ಸಿಬ್ಬಂದಿ ಸದರಿ ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿಲ್ಲ. ಗಲಾಟೆಯಾದ ದಿನವೇ ಬೆಂಗಳೂರಿನಲ್ಲಿರುವ ಜಯನಗರದ ಬೆಂಗಳೂರು ಆಸ್ಪತ್ರೆಯಲ್ಲಿ ದಾಖಲಾದೇ, ಸುಮಾರು 20 ದಿನಗಳ ನಂತರ ಬಿಡುಗಡೆಯಾದೇ, ತಾರೀಖು ನೆನಪಿಲ್ಲ. 20 ನೇ ತಾರೀಖಿನವರೆಗೆ ಐಸಿಯುನಲ್ಲಿದ್ದೆ.

**10.** ತಿಪ್ಪಸಂದ್ರ ಹೋಬಳಿಯ ದಂಡೇನಹಳ್ಳಿಯ ಸರ್ವೆ ನಂ.31, 59 ಮತ್ತು 82 ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳ ಮುಂದೆ ಪಾಲು ಪಾರಿಕಾತ್‌ನಂತೆ ಖಾತೆಯಾಗಿಲ್ಲ, ಎಂ.ಆರ್‌ಗೂ ಮತ್ತು ಆರ್.ಟಿ.ಸಿ.ಗೂ ವ್ಯತ್ಯಾಸ ಇದೆ ಎಂದು ದೂರು ನೀಡಿದ್ದರು ಅಂದರೆ ನನಗೆ ಗೊತ್ತಿಲ್ಲ.

**11.** ತಾಃ07.10.2014 ರಂದು ಉಪವಿಭಾಗಧಿಕಾರಿಗಳಿಗೆ ಸದರಿ ಮನವಿಯನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಈ ಆದೇಶದ ನಂತರ 1 ನೇ ಆರೋಪಿ ರಾಮಣ್ಣ ಇವರ ಹೆಸರಿಗೆ ಜಾಸ್ತಿ ಬರುತ್ತದೆ ಅಂದರೆ ನನಗೆ ಗೊತ್ತಿಲ್ಲದೇ ಆದೇಶ ಮಾಡಿಸಿಕೊಂಡಿರುತ್ತಾರೆ.

**12.** ತಾಃ 13.11.2014 ರಂದು ಸರ್ವೆ ನಂ.82 ರಲ್ಲಿ ಆರೋಪಿತರು ಬೆಳೆದಂತ ಕುಂಬಳಕಾಯಿಯನ್ನು ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಸೇರಿ ಕಿತ್ತು ಹಾಕಿದೆವು ಅಂದರೆ ಸರಿಯಲ್ಲ. ಅದನ್ನು ಕೇಳಲು ಬಂದ 4 ನೇ ಆರೋಪಿ ಇವರೊಂದಿಗೆ ಜಗಳ ಮಾಡಿದ್ದೀರಿ ಅಂದರೆ ಸರಿಯಲ್ಲ. ಅದೇ ಘಟನೆಗೆ ಸಂಬಂಧಪಟ್ಟಂತೆ 4 ನೇ

ಆರೋಪಿ ನಮ್ಮ ವಿರುದ್ಧ ದೂರು ದಾಖಲು ಮಾಡಿದ್ದಾರೆ ಅದು ಕ್ರೈಂ ನಂ.333/14 ಇರುತ್ತದೆ ಅಂದರೆ ಸರಿ. ಅದರ ಸಿಸಿ ನಂಬರ್ 522/15 ಇರುತ್ತದೆ ಅಂದರೆ ಸರಿ.

**13.** ನಾನು ಕುಣಿಗಲ್ ಆಸ್ಪತ್ರೆಗೆ ಹೋದಾಗ ಬೆಳಿಗ್ಗೆ 10 ಗಂಟೆಯಾಗಿತ್ತು. ಅಲ್ಲಿಗೆ ವಕೀಲರು ಯಾರೂ ಬಂದಿರಲಿಲ್ಲ. ನಾನು, ನನ್ನ ಮಗ ಕುಣಿಗಲ್ ಆಸ್ಪತ್ರೆಯಲ್ಲಿ ಒಂದೂವರೆ ಗಂಟೆ ಇದ್ದೆವು. ಸದರಿ ಆಸ್ಪತ್ರೆಯಲ್ಲಿ ವೈದ್ಯರು ನನ್ನನ್ನು ವಿಚಾರಿಸಿ, ಗಲಾಟೆ ಏನಾಯಿತು, ಹೇಗಾಯಿತು ಎಂದು ಕೇಳಿ ಬರೆದುಕೊಂಡರು. ಕುಣಿಗಲ್ ಆಸ್ಪತ್ರೆಯಿಂದ ಬೆಂಗಳೂರು ಆಸ್ಪತ್ರೆಗೆ ಹೋಗುವ ದಾರಿಯಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳು ಕೊಲಂಬಿಯಾ ಆಸ್ಪತ್ರೆ, ಲಕ್ಷ್ಮೀ ಆಸ್ಪತ್ರೆ, ಕೆಂಪೇಗೌಡ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ, ಇನ್ನೂ ಹಲಾವಾರು ಆಸ್ಪತ್ರೆಗಳು ಇವೆ ಅಂದರೆ ನನಗೆ ಗೊತ್ತಿಲ್ಲ.

**14.** ನನ್ನ ಭಾವಮೈದುನ ಜಗದೀಶ ನನ್ನನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಆಸ್ಪತ್ರೆಯಿಂದ ನಾನು ಬಿಡಗಡೆಯಾಗುವ ಮೊದಲು ಗಾಯದ ಪ್ರಮಾಣಪತ್ರವನ್ನು ಕುದೂರು ಪೊಲೀಸರು ತೆಗೆದುಕೊಂಡರು. ಬಿಡುಗಡೆಯಾದ ನಂತರ ನಾವು ಕೂಡ ಗಾಯದ ಪ್ರಮಾಣಪತ್ರವನ್ನು ತೆಗೆದುಕೊಂಡು ಬಂದು ಮನೆಯಲ್ಲಿಟ್ಟುಕೊಂಡು ನಂತರ ಪೊಲೀಸರಿಗೆ ನೀಡಿದ್ದೇನೆ.

**15.** ಆ ಸಮಯದಲ್ಲಿ ನನ್ನ ಪತ್ನಿ ಪಕ್ಕದಲ್ಲಿದ್ದ ನಮ್ಮ ಮನೆಯ ಕಾಂಪೌಂಡಿನಲ್ಲಿದ್ದರು. ಸದರಿ ಸ್ಥಳಕ್ಕೆ ಐದು ಆರೋಪಿಗಳು ಬಂದರು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೀರಾ ಅಂದರೆ ನೀಡಿದ್ದೇನೆ.

**16.** ಆರೋಪಿ - ಮಂಜ ದೊಣ್ಣೆಯಿಂದ ನನ್ನ ಎಡ ಕಿಬ್ಬರಿಗೆ, ಪಕ್ಕೆ ಹಾಗು ಬಲಗಾಲಿಗೆ ಹೊಡೆದನು, ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೀರಾ ಅಂದರೆ ನೀಡಿದ್ದೇನೆ. ಆ ಹೊತ್ತಿಗೆ ನನ್ನ ಪತ್ನಿ ಸ್ಥಳಕ್ಕೆ ಓಡಿ ಬಂದರು. ಆಗ ಆರೋಪಿ - ಮಂಜ ಮರದ ದೊಣ್ಣೆಯಿಂದ ನನ್ನ ಪತ್ನಿಯ ಮಂಡಿಗೆ ಹೊಡೆದನು, ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೀರಾ ಅಂದರೆ ನೀಡಿದ್ದೇನೆ. ನನ್ನ ಪತ್ನಿ ನನ್ನನ್ನು ಹಾಗು ನನ್ನ ಮಗನನ್ನು ಕರೆದುಕೊಂಡು ಕುಣಿಗಲ್ ಆಸ್ಪತ್ರೆಗೆ ಹೋದರು, ಅಲ್ಲಿ ಆಗುವುದಿಲ್ಲ ಎಂದು ಹೇಳಿದ್ದರಿಂದ ನಮ್ಮನ್ನು ನಂತರ ಬೆಂಗಳೂರಿನ

ಸೌತ್‌ಯಂಡ್ ವೃತ್ತದ ಬಳಿಯಿರುವ ಬೆಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋದರು, ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೀರಾ ಅಂದರೆ ನೀಡಿದ್ದೇನೆ.

**17.** ನಾನು ಆಸ್ಪತ್ರೆಯಲ್ಲಿ **15-20** ದಿನಗಳ ಕಾಲ ಇದ್ದೆನು, ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ.

**(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**